‘ಅವತಾರ ಪುರುಷ’ ನಾಯಕನಟ ಶರಣ್ ಹಾಗೂ ನಿರ್ದೇಶಕ ಸಿಂಪಲ್ ಸುನಿ ಜೋಡಿಯ ಕಾರಣಕ್ಕೆ ಗಮನಸೆಳೆದರೂ, ಗಲ್ಲಾಪೆಟ್ಟಿಗೆಯಲ್ಲಿ ಹೆಚ್ಚು ಗಿಟ್ಟದ ಸಿನಿಮಾ. ಆರ್. ಮಧುಚಂದ್ರ ನಿರ್ದೇಶನದ ‘ಸೆಲ್ಫಿ ಮಮ್ಮಿ ಗೂಗಲ್ ಡ್ಯಾಡಿ’, ಪಿ.ಕೆ. ರಾಹುಲ್ ನಿರ್ದೇಶನದ ‘ಸಕುಟುಂಬ ಸಮೇತ’ ಹಾಗೂ ಅಭಿಲಾಶ್ ಶೆಟ್ಟಿ ನಿರ್ದೇಶನದ ‘ಕೋಳಿ ತಾಳ್’ ಸಿನಿಮಾಗಳು ವಿಭಿನ್ನ ವಸ್ತು, ನಿರೂಪಣೆಯಲ್ಲಿನ ಲವಲವಿಕೆ ಹಾಗೂ ಪ್ರಯೋಗಶೀಲತೆಯ ಹಂಬಲದ ಕಾರಣಕ್ಕೆ ಗಮನಸೆಳೆದವು.

### ಚೇತೋಹಾರಿ ಮುಂಗಾರು

ಮುಂಗಾರಿನ ಮುನ್ನುಡಿಯ ಮಾಸ ಜೂನ್ ತಿಂಗಳು, ಗಾಂಧಿನಗರದ ಪಾಲಿಗೆ ಚೇತೋಹಾರಿಯಾಗಿತ್ತು. ಈ ತಿಂಗಳಲ್ಲಿ ತೆರೆಕಂಡ, ಕರಣ್ ಅನಂತ್ ಹಾಗೂ ಅನಿರುಧ್ ಮಹೇಶ್ ನಿರ್ದೇಶನದ ‘ಹರಿಕಥೆ ಅಲ್ಲ ಗಿರಿಕಥೆ’ ಸಿನಿಮಾದ ಬಗ್ಗೆ ಒಳ್ಳೆಯ ಮಾತುಗಳು ವ್ಯಕ್ತವಾದವು. ರಿಷಬ್ ಶೆಟ್ಟಿ ಈ ಚಿತ್ರದ ನಾಯಕ. ಸತೀಶ್ ನೀನಾಸಂ ಹಾಗೂ ಶ್ರದ್ಧಾ ಶ್ರೀನಾಥ್ ಜೋಡಿಯ ‘ಡಿಯರ್ ವಿಕ್ರಂ’ ನಕ್ಸಲ್ ಸಮಸ್ಯೆ ಸೇರಿದಂತೆ ಹಲವು ಸಾಮಾಜಿಕ ಬಿಕ್ಕಟ್ಟುಗಳಿಗೆ ಮುಖಾಮುಖಿಯಾದ ಕಾರಣಕ್ಕೆ ಗಮನಸೆಳೆಯಿತು. ಕೆ.ಎಸ್. ನಂದೀಶ್ ನಿರ್ದೇಶನದ ಈ ಸಿನಿಮಾ ‘ಗೋಧ್ರಾ’ ಹೆಸರಿನಲ್ಲಿ ಚಿತ್ರೀಕರಣ ನಡೆಸಿದರೂ, ತೆರೆಕಾಣುವ ವೇಳೆಗೆ ‘ಡಿಯರ್ ವಿಕ್ರಂ’ ಆಗಿತ್ತು.

ಮುಂಗಾರಿನ ಬಿಸುಪನ್ನು ಸ್ಪಷ್ಟವಾಗಿ ಪ್ರೇಕ್ಷಕರ ಅನುಭವಕ್ಕೆ ತಂದುದು, ಜೂನ್ 10ರಂದು ತೆರೆಕಂಡ ‘777 ಚಾರ್ಲಿ’. ಕಿರಣ್ ರಾಜ್ ಕೆ. ನಿರ್ದೇಶನದ ಈ ಸಿನಿಮಾದುದ್ದಕ್ಕೂ ನಾಯಕನಟ ರಕ್ಷಿತ್ ಶೆಟ್ಟಿ ಅವರೊಂದಿಗೆ ತೆರೆ ಆವರಿಸಿಕೊಂಡಿದ್ದು, ಚಾರ್ಲಿ ಹೆಸರಿನ ನಾಯಿ. ಸಂಗೀತಾ ಶೃಂಗೇರಿ, ರಾಜ್ ಬಿ. ಶೆಟ್ಟಿ, ಡ್ಯಾನಿಶ್ ಶೇಟ್ ತಾರಾಗಣದಲ್ಲಿದ್ದರೂ, ಪ್ರೇಕ್ಷಕರ ಮನಸ್ಸಿನಲ್ಲಿ ಉಳಿದದ್ದು ರಕ್ಷಿತ್ ಹಾಗೂ ಚಾರ್ಲಿಯ ಮುಖಗಳಷ್ಟೇ. ನಾಯಕನ ಹೆಸರನ್ನು ಸಿನಿಮಾ ಶೀರ್ಷಿಕೆಯಾಗಿಸುವುದು ಸಾಮಾನ್ಯ. ಆದರೆ, ಈ ಚಿತ್ರದಲ್ಲಿ ತಾರಾವರ್ಚಸ್ಸಿನ ನಾಯಕನಿದ್ದಾಗ್ಯೂ, ನಾಯಿಯ ಹೆಸರನ್ನೇ ಚಿತ್ರದ ಶೀರ್ಷಿಕೆಯನ್ನಾಗಿಸಿದ್ದು ವಿಶೇಷ. ಏಕಾಂಗಿ ತರುಣನೊಬ್ಬ ತನ್ನ ನಾಯಿಯೊಂದಿಗೆ ನಡೆಸುವ ಪಯಣದ ಭಾವುಕತೆ ನೋಡುಗರನ್ನು ಮರುಳುಗೊಳಿಸಿತು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಸಿನಿಮಾ ನೋಡಿ ಕಣ್ಣೀರಿಟ್ಟದ್ದು ಸುದ್ದಿಯಾಯಿತು. ಅದರ ಫಲಶ್ರುತಿಯಾಗಿ ಸಿನಿಮಾಕ್ಕೆ ಸಂಪೂರ್ಣ ತೆರಿಗೆ ವಿನಾಯಿತಿ ದೊರೆಯಿತು. ಸಿನಿಮಾ ‘100 ಕೋಟಿ’ ಕ್ಲಬ್‌ಗೆ ಸೇರಿತು ಎಂದು ಗಾಂಧಿನಗರದ ಗಲ್ಲಾಪೆಟ್ಟಿಗೆಯ ಪಂಡಿತರು ಷರಾ ಬರೆದಿರುವುದರೊಂದಿಗೆ, ‘ಚಾರ್ಲಿ’ ದಾಖಲೆ ಗಳಿಕೆಯ ಕನ್ನಡ ಸಿನಿಮಾಗಳ ಸಾಲಿನಲ್ಲಿ ತನ್ನನ್ನು ಗುರ್ತಿಸಿಕೊಂಡಿದೆ.

‘ರಂಗಿತರಂಗ’ ಖ್ಯಾತಿಯ ಅನೂಪ್ ಭಂಡಾರಿ ನಿರ್ದೇಶನದ ‘ವಿಕ್ರಾಂತ್ ರೋಣ’ ಜುಲೈ 28ರಂದು ತೆರೆಕಂಡ ಸಿನಿಮಾ. ಸುದೀಪ್ ಅಭಿನಯದ, ಜಾಕ್ವೆಲಿನ್ ಫರ್ನಾಂಡಿಸ್ ಗ್ಲ್ಯಾಮರ್ ಒಳಗೊಂಡಿದ್ದ ಈ ಸಿನಿಮಾದ ಪ್ರಚಾರ ದೊಡ್ಡಮಟ್ಟದಲ್ಲಿ ನಡೆಯಿತು. ದುಬೈನ ಬುರ್ಜ್ ಖಲೀಫಾ ಕಟ್ಟಡದ ಭಿತ್ತಿಯಲ್ಲಿ ‘ವಿಕ್ರಾಂತ್ ರೋಣ’ದ ಟೈಟಲ್ ಲೋಗೊ ಅನಾವರಣಗೊಂಡಿತು. ಆದರೆ ಸಿನಿಮಾದ ಯಶಸ್ಸು ಅಷ್ಟು ಎತ್ತರದಲ್ಲೇನೂ ಇರಲಿಲ್ಲ. ‘ರಂಗಿತರಂಗ’ದ ನೆರಳಿನಿಂದ ಅನೂಪ್ ಹೊರಬಂದಿಲ್ಲ ಎನ್ನುವ ಅಭಿಪ್ರಾಯಗಳೂ ವ್ಯಕ್ತವಾದವು. ಸಿನಿಮಾದ ಯಶಸ್ಸಿಗಿಂತಲೂ ಚಿತ್ರದ ‘ರಾ ರ ರಕ್ಕಮ್ಮ’ ಗೀತೆಯೇ ಹೆಚ್ಚು ಜನಪ್ರಿಯವಾಗಿ, ಮಕ್ಕಳ ಬಾಯಿಗೂ ಒಗ್ಗಿಕೊಂಡಿತು.

ಜುಲೈ ತಿಂಗಳ ಗಮನಾರ್ಹ ಸಿನಿಮಾ ‘ಪೆಟ್ರೊಮ್ಯಾಕ್ಸ್’. ‘ಸಿದ್ಲಿಂಗು’, ‘ನೀರ್‌ದೋಸೆ’ ಖ್ಯಾತಿಯ ವಿಜಯ್ ಪ್ರಸಾದ್ ನಿರ್ದೇಶನದ ‘ಪೆಟ್ರೊಮ್ಯಾಕ್ಸ್’ ಗಲ್ಲಾಪೆಟ್ಟಿಗೆಯಲ್ಲಿ ಹೊಸ ಬೆಳಕು ಕಾಣಲಿಲ್ಲ, ಕಾವನ್ನೂ ಉಂಟುಮಾಡಲಿಲ್ಲ. ನೀನಾಸಂ ಸತೀಶ್, ಹರಿಪ್ರಿಯಾ ಜೋಡಿ ಮೋಡಿ ಮಾಡುವಲ್ಲಿ ಯಶಸ್ಸು ಕಾಣಲಿಲ್ಲ. ಶೀತಲ್ ಶೆಟ್ಟಿ ನಿರ್ದೇಶನದ ‘ವಿಂಡೋ ಸೀಟ್’ ಹಾಗೂ ಕೆ.ಎಂ. ಶಶಿಧರ್ ನಿರ್ದೇಶನದ ‘ಶುಗರ್‌ಲೆಸ್’ ಜುಲೈನಲ್ಲಿ



## ಗುಡ್, ಬ್ಯಾಡ್, ಅಗ್ಲಿ

**ಕನ್ನಡ** ಚಿತ್ರರಂಗದ 2022ರ ಸ್ಥಿತಿಗತಿಯನ್ನು ಹಿರಿಯ ನಿರ್ದೇಶಕ ಎಸ್‌.ವಿ. ರಾಜೇಂದ್ರಸಿಂಗ್ ಬಾಬು ವಿಶ್ಲೇಷಿಸುವುದು, ‘ಗುಡ್, ಬ್ಯಾಡ್, ಅಗ್ಲಿ’ ಎನ್ನುವ ಮೂರು ಪದಗಳ ಮೂಲಕ.

ಬ್ಯಾಡ್ ಮತ್ತು ಅಗ್ಲಿ ಎನ್ನುವುದು ವಿಫಲ ಮತ್ತು ಕಳಪೆ ಸಿನಿಮಾಗಳ ಕುರಿತ ಮಾತು. ನಕಾರಾತ್ಮಕ ಸಂಗತಿಗಳನ್ನು ಮಾತನಾಡದೆ, ಒಳ್ಳೆಯ ಸಂಗತಿಗಳ ಬಗ್ಗೆಯಷ್ಟೇ ಮಾತನಾಡುವುದಾದರೆ, ‘ಕಾಂತಾರ ಸಿನಿಮಾದ್ದು ಅದ್ಭುತ ಗೆಲುವು’ ಎನ್ನುತ್ತಾರೆ ರಾಜೇಂದ್ರಸಿಂಗ್ ಬಾಬು.

‘ಕಾಂತಾರ ಚಿತ್ರದ ಗೆಲುವಿನಲ್ಲಿ ನಮಗೆ ಪಾಠವೊಂದಿದೆ. ಅದು ನೇಟಿವಿಟಿ ಕುರಿತಾದುದು. ಪ್ಯಾನ್ ಇಂಡಿಯಾ ಹೆಸರಿನಲ್ಲಿ ನಾವು ಮಣ್ಣಿನ ಕಥೆಗಳನ್ನು ಪಕ್ಕಕ್ಕೆ ಸರಿಸುತ್ತಿದ್ದೇವೆ. ನಮ್ಮದೇ ಕಥೆಯನ್ನು ಪ್ಯಾನ್ ಇಂಡಿಯಾ ಮಟ್ಟದಲ್ಲೂ ಹೇಳಿ ಗೆಲುವು ಸಾಧಿಸಬಹುದು ಎನ್ನುವುದಕ್ಕೆ ಕಾಂತಾರ ಒಳ್ಳೆಯ ಉದಾಹರಣೆ’ ಎನ್ನುತ್ತಾರೆ.

2022ರಲ್ಲಿ ಕನ್ನಡ ಸಿನಿಮಾಗಳು ನೂರಾರು ಕೋಟಿ ರೂಪಾಯಿ ಗಳಿಕೆ ಸಾಧಿಸಿ ದಾಖಲೆ ಬರೆದವು ಎನ್ನುವುದರ ಬಗ್ಗೆ ಬಾಬು ಅವರಿಗೆ ಪೂರ್ಣ ಸಮ್ಮತವಿಲ್ಲ. ಮೊದಲಿನಿಂದಲೂ ಯಶಸ್ವಿ ಸಿನಿಮಾಗಳ ಸಂಖ್ಯೆ ಶೇ. 5ರ ಆಸುಪಾಸಿನಲ್ಲೇ ಇರುತ್ತದೆ. ಈ ವರ್ಷವೂ ಯಶಸ್ಸಿನ ಪ್ರಮಾಣದಲ್ಲಿ ಅಂಥ ವ್ಯತ್ಯಾಸವೇನಿಲ್ಲ. ಸಿನಿಮಾಗಳ ಗೆಲುವಿನ ನಿಟ್ಟಿನಲ್ಲಿ ನೀಡುವ ಅಂಕಿಅಂಶಗಳು ಬಹುತೇಕ ಸಂದರ್ಭದಲ್ಲಿ ಉತ್ಪ್ರೇಕ್ಷೆಯಿಂದ ಕೂಡಿರುತ್ತವೆ. ಒಳಹೂರಣ ನಮಗಷ್ಟೇ ಗೊತ್ತಿರುತ್ತದೆ’ ಎನ್ನುವುದು ರಾಜೇಂದ್ರಸಿಂಗ್ ಬಾಬು ಅವರ ಅಭಿಪ್ರಾಯ.

